ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂ.ಸಾಗ್ರಂಇ/ನಿಕ/ಪುಖರಿ/ಪಪ್ರ/2019ಪ್ರ/7/ /2019-20 4573

ನಿರ್ದೇಶಕರ ಕಛೇರಿ.
ವಿಶ್ವೇಶ್ವರಯ್ಯ ಮುಖ್ಯ ಗೋಪುರ
4ನೇ ಮಹಡಿ. ಡಾ.ಅಂಬೇಡ್ಕರ್ ವೀಧಿ.
ಬೆಂಗಳೂರು-560 001.
ದಿನಾಂಕ: 30-12-2019.

-: ಪ್ರಕಟಣೆ :-

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗೆ ವಿವಿಧ ಯೋಜನೆಯಡಿಯಲ್ಲಿ 2019ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಣೆಯಾದ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಸಲ್ಲಿಸುವ ಬಗ್ಗೆ.

********

2019ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಸಾಹಿತ್ಯ/ಲಲಿತಕಲೆ/ವಿಜ್ಞಾನ/ಮಾನವಿಕ/ವೈದ್ಯಕೀಯ/ ತಾಂತ್ರಿಕ/ಸ್ಪರ್ಧಾತ್ಮಕ/ ಪರಾಮರ್ಶನ ಕೃತಿಗಳು ಹಾಗೂ ಮಕ್ಕಳ ಸಾಹಿತ್ಯ/ನವಸಾಕ್ಷರರ ಕೃತಿಗಳು ಇತ್ಯಾದಿ ವಿಷಯಗಳ ಕನ್ನಡ/ಆಂಗ್ಲ/ಇತರೆ ಭಾರತೀಯ ಭಾಷೆಯ ಗ್ರಂಥಗಳ ಆಯ್ಕೆಗೆ ಲೇಖಕರು. ಲೇಖಕ-ಪ್ರಕಾಶಕರು. ಪ್ರಕಟಣಾ ಸಂಸ್ಥೆಗಳು ಹಾಗೂ ವಿತರಕರಿಂದ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಸ್ವೀಕರಿಸಲು ಆಹ್ವಾನಿಸಿದೆ. ಪುಸ್ತಕಗಳು ಈ ಕೆಳಗೆ ತಿಳಿಸಿದ ನಿಬಂಧನೆಗಳಿಗೆ ಅನುಗುಣವಾಗಿರಬೇಕು.

1. ಪುಸ್ತಕಗಳು 01 ಜನವರಿ 2019 ರಿಂದ 31 ಡಿಸೆಂಬರ್ 2019 ರವರಗೆ ಪ್ರಥಮ ಮುದ್ರಣವಾಗಿ ಪ್ರಕಟವಾಗಿರಬೇಕು/ ಮರುಮುದ್ರಣವಾದಲ್ಲಿ ಎರಡು ಮುದ್ರಣಗಳ ನಡುವಿನ ಅಂತರ ಹತ್ತು ವರ್ಷಗಳಾಗಿರಬೇಕು. ಈ ಬಗ್ಗೆ ದೃಢೀಕರಣ ಪತ್ರವನ್ನು ಹಳೆಯ ನೋಂದಣಿ ಪ್ರಮಾಣ ಪತ್ರದೊಂದಿಗೆ ನೀಡಬೇಕು. ಸುಳ್ಳು ಮಾಹಿತಿ ನೀಡಿರುವುದು ಕಂಡುಬಂದಲ್ಲಿ ಅಂತಹ ಲೇಖಕ. ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
2. ಪುಸ್ತಕದ ಶೀರ್ಷಿಕೆ. ಗ್ರಂಥಕರ್ತರ ಹೆಸರು. ಪ್ರಕಾಶಕರ ಹೆಸರು. ಸಂಪೂರ್ಣ ವಿಳಾಸ. ಪ್ರಕಾಶಕರು ಹಾಗೂ ಮುದ್ರಕರ ವಿಳಾಸಗಳನ್ನು ಮುದ್ರಿಸಿರಬೇಕು. ಪುಟ ಸಂಖ್ಯೆ. ಪ್ರಕಟಣೆಯ ವರ್ಷ. ಆವೃತ್ತಿಯ ಎಲ್ಲಾ ವರ್ಷಗಳ ವಿವರ. ಮುಖ ಬೆಲೆಗಳನ್ನು ಸ್ಪಷ್ಟವಾಗಿ ತಾಂತ್ರಿಕ ಪುಟದಲ್ಲಿ (imprint page) ನಮೂದಿಸಿರಬೇಕು. ಇವುಗಳಲ್ಲಿ ತಾಂತ್ರಿಕ ಲೋಪದೋಷಗಳು ಏನಾದರೂ ಇದ್ದಲ್ಲಿ ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಗೆ ಇದೆ.
3. ಪುಸ್ತಕ ಖರೀದಿಗೆ ನಿಗದಿಯಾದ ಮೊತ್ತದಲ್ಲಿ ಶೇ.80 ರಷ್ಟು ಕನ್ನಡ ಪುಸ್ತಕಗಳು. ಶೇ.20 ರಷ್ಟು ಆಂಗ್ಲ ಭಾಷೆಯ ಹಾಗೂ ಇತರೆ ಭಾರತೀಯ ಭಾಷೆಯ ಪುಸ್ತಕಗಳನ್ನು ಆಯ್ಕೆ ಮಾಡಲು ಅವಕಾಶವಿರುವುದರಿಂದ ನಿಯಮಾವಳಿಗಳಿಗೆ ಒಳಪಟ್ಟು ಪುಸ್ತಕಗಳನ್ನು ಸಲ್ಲಿಸಬಹುದು.
4. ಮುವತ್ತೆರಡು ಪುಟಗಳಿಗಿಂತ ಕಡಿಮೆ ಪುಟಗಳಿರುವ ಹಾಗೂ ಸೆಂಟರ್ ಪಿನ್ನಿಂಗ್ ಮಾಡಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು (ಮಕ್ಕಳ ಹಾಗೂ ನವಸಾಕ್ಷರ ಪುಸ್ತಕಗಳನ್ನು ಹೊರತುಪಡಿಸಿ).
5. ಲೇಖಕರೇ ಪ್ರಕಾಶಕರಾಗಿರುವ ಸಂದರ್ಭದಲ್ಲಿ ಲೇಖಕರೇ ಅರ್ಜಿ ಸಲ್ಲಿಸಬೇಕು.
6. ಪುಸ್ತಕಗಳನ್ನು ಪ್ರಕಟಿಸುವ ಮೂಲ ಪ್ರಕಾಶಕರು ಅಥವಾ ಅವರ ಅನುಮತಿಯನ್ನು ಅಧಿಕೃತವಾಗಿ ಪಡೆದ ಪುಸ್ತಕ ವ್ಯಾಪಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. ನೋಂದಣಿ ಪ್ರಮಾಣಪತ್ರದಲ್ಲಿ ಅವರ ವಿಳಾಸವನ್ನು ದಾಖಲು ಮಾಡಿರಬೇಕು.
7. ಡಿಜಿಟಲ್ ಗ್ರಂಥಾಲಯ ಸೇವೆಯನ್ನು ಸಾರ್ವಜನಿಕ ಓದುಗರಿಗೆ ಒದಗಿಸಲು ಅನುಕೂಲವಾಗುವಂತೆ ಆಸಕ್ತಿಯುಳ್ಳ ಲೇಖಕರು. ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು ಪುಸ್ತಕವನ್ನು ಆಯ್ಕೆಗೆ ಸಲ್ಲಿಸುವಾಗ ತಮ್ಮ ಅನುಮತಿ ಪತ್ರದೊಂದಿಗೆ ಸದರಿ ಪುಸ್ತಕದ ಸಾಫ್ಟ್ ಕಾಪಿಯನ್ನು ಸಿ. ಡಿ ರೂಪದಲ್ಲಿ ಒದಗಿಸಲು ಕೋರಿದೆ.
8. ನ್ಯೂಸ್ ಪ್ರಿಂಟ್ ಅಥವಾ ಇತರೆ ಅಗ್ಗದ ಕಾಗದದಲ್ಲಿ ಮುದ್ರಿಸಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು.
9. ಆಯ್ಕೆಗೆ ಒಪ್ಪಿಸಿದ ಯಾವುದೇ ಭಾಷೆಯ ಗ್ರಂಥಗಳನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವುದಿಲ್ಲ.
10. ಲೇಖಕರು/ಲೇಖಕ-ಪ್ರಕಾಶಕರು/ಪ್ರಕಟಣಾ ಸಂಸ್ಥೆಗಳು ತಾವು ಪ್ರಕಟಿಸಿದ ಪುಸ್ತಕಗಳನ್ನು ಬೆಂಗಳೂರಿನ ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಗ್ರಂಥಸ್ವಾಮ್ಯ(ಕಾಪಿರೈಟ್) ಕಾಯ್ದೆಯಡಿಯಲ್ಲಿ ಪ್ರತಿ ಗ್ರಂಥದ ಮೂರು ಪ್ರತಿಗಳನ್ನು ಮುಫತ್ತಾಗಿ ಸಲ್ಲಿಸಿ ನೋಂದಣೆಯನ್ನು ಮಾಡಿಸತಕ್ಕದ್ದು. ಆಯ್ಕೆಗಾಗಿ ಸಲ್ಲಿಸುವ ಪುಸ್ತಕದ ಕೊನೆಯ ಪುಟದಲ್ಲಿ ನೋಂದಣಿ ಪತ್ರದ ನಕಲನ್ನು ಕಡ್ಡಾಯವಾಗಿ ಅಂಟಿಸಿರಬೇಕು. ಇಲ್ಲದೇ ಇದ್ದಲ್ಲಿ ಅಂತಹ ಗ್ರಂಥಗಳನ್ನು ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಗೆ ಇರುತ್ತದೆ. ನೋಂದಣಿ ಪ್ರಮಾಣ ಪತ್ರದಲ್ಲಿರುವ ವಿಳಾಸಕ್ಕೆ ಮುಂದಿನ ಎಲ್ಲಾ ಪತ್ರ ವ್ಯವಹಾರಗಳನ್ನು. ಆದೇಶಗಳನ್ನು ಕಳುಹಿಸಲಾಗುವುದು.

..2

11. ನಿಗದಿತ ಅರ್ಜಿ ನಮೂನೆಯಲ್ಲಿ (ಅರ್ಜಿ ನಮೂನೆಯು ಇಲಾಖೆಯ ಅಂತರ್ಜಾಲದಲ್ಲಿ www.karnatakapubliclibrary.gov.in ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಲ್ಲಿ ದೊರೆಯುತ್ತವೆ) 1) ಅರ್ಜಿದಾರರ ಹೆಸರು ಮತ್ತು ವಿಳಾಸ 2) ಪ್ರಕಾಶಕರು/ ಸರಬರಾಜುದಾರರ ಹೆಸರು ಮತ್ತು ವಿಳಾಸ 3)ಎ) ಅರ್ಜಿದಾರರು ಪುಸ್ತಕದ ಲೇಖಕರೇ/ ಪ್ರಕಾಶಕರೇ/ವಿತರಕರೇ ಬಿ) ಪುಸ್ತಕದ ಹಕ್ಕು 4) ಎ) ಪುಸ್ತಕದ ಶಿರೋನಾಮೆ ಬಿ) ಲೇಖಕರ ಹೆಸರು ಸಿ) ಸಂಪುಟಗಳ ಸಂಖ್ಯೆ ಡಿ) ಪುಸ್ತಕದ ವಿಷಯ 5) ಪ್ರಕಟಣಾ ವರ್ಷ 6) ಅನುವಾದವಾಗಿದ್ದಲ್ಲಿ ಮೂಲ ಲೇಖಕರ ಹೆಸರು ಮತ್ತು ಭಾಷೆ 7) ಎ) ಪುಸ್ತಕದ ಅಳತೆ ಬಿ) ಪುಟಗಳ ಸಂಖ್ಯೆ ಸಿ) ಬೈಂಡಿಂಗ್ ಡಿ)ಪುಸ್ತಕದ ಬೆಲೆ ಇ) ಪುಸ್ತಕ ಮುದ್ರಿಸಲು ಬಳಸಿದ ಕಾಗದದ ಗುಣಮಟ್ಟ 8) ಗ್ರಂಥವು ಮರುಮುದ್ರಣಗೊಂಡಿದ್ದರೆ. ಮೊದಲ ಆವೃತ್ತಿಯ ವರ್ಷ 9) ಗ್ರಂಥಸ್ವಾಮ್ಯ ನೋಂದಣಿ ಸಂಖ್ಯೆ ಮತ್ತು ವರ್ಷ 10) ಪುಸ್ತಕದ ಸಾಫ್ಟ್ ಕಾಫಿಯನ್ನು ಸಿ.ಡಿ ರೂಪದಲ್ಲಿ ಲಗತ್ತಿಸುವುದು. 11) ಲೇಖಕ. ಲೇಖಕ-ಪ್ರಕಾಶಕರು ಕಡ್ಡಾಯವಾಗಿ ಪ್ಯಾನ್ ಸಂಖ್ಯೆ ಹಾಗೂ ಪ್ರಕಾಶಕರು/ಮಾರಾಟಗಾರರು ಕಾರ್ಮಿಕ ಇಲಾಖೆಯಿಂದ ನೀಡುವ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ 1961ರ ಪ್ರಕಾರ ಸಂಸ್ಥೆಗಳ ನೋಂದಣಿ ಪತ್ರ ಅಥವಾ ಜಿ.ಎಸ್.ಟಿ ಪ್ರಮಾಣ ಪತ್ರದ ಸಂಖ್ಯೆಯನ್ನು ನಮೂದಿಸುವುದು. ಮೇಲ್ಕಂಡ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಅರ್ಜಿಯ ಘೋಷಣಾ ಪ್ರಮಾಣ ಪತ್ರದಲ್ಲಿ ಅರ್ಜಿದಾರರು ಕಡ್ಡಾಯವಾಗಿ ಸಹಿ ಮಾಡುವುದು. ಆಯ್ಕೆಯಾದ ಕನ್ನಡ/ಆಂಗ್ಲ/ಇತರೆ ಭಾರತೀಯ ಭಾಷೆಯ ಪುಸ್ತಕಗಳಿಗೆ ಸರ್ಕಾರದ ಆದೇಶದಂತೆ ಪ್ರತಿ ಪುಟಕ್ಕೆ ನಿಗದಿಪಡಿಸಿದ ಬೆಲೆಯನ್ವಯ ಬೆಲೆಯನ್ನು ನಿಗದಿಪಡಿಸಲಾಗುವುದು.

12. 2019ನೇ ಸಾಲಿನಲ್ಲಿ 01-ಜನವರಿ-2019 ರಿಂದ 31-ಡಿಸೆಂಬರ್-2019 ರವರೆಗೆ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳನ್ನು ಗ್ರಂಥಸ್ವಾಮ್ಯ ವಿಭಾಗ, ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ದಿನಾಂಕ: 30-01-2020 ವರಗೆ ಕಾಪಿರೈಟ್ ಮಾಡಿಸಿರುವ ಪುಸ್ತಕಗಳನ್ನು ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ಹಾಗೂ ದಿನಾಂಕ: 26-11-2019 ರಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಸಕಾಲ ಮತ್ತು ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ, ಡಿಜಿಟಲ್ ಗ್ರಂಥಾಲಯ ಸೇವೆಯನ್ನು ಸಾರ್ವಜನಿಕ ಓದುಗರಿಗೆ ಒದಗಿಸಲು ಅನುಕೂಲವಾಗುವಂತೆ ಆಸಕ್ತಿಯುಳ್ಳ ಲೇಖಕರು, ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು ಪುಸ್ತಕವನ್ನು ಆಯ್ಕೆಗೆ ಸಲ್ಲಿಸುವಾಗ ತಮ್ಮ ಅನುಮತಿ ಪತ್ರದೊಂದಿಗೆ ಸದರಿ ಪುಸ್ತಕದ ಸಾಫ್ಟ್ ಕಾಫಿಯನ್ನು ಸಿ. ಡಿ ರೂಪದಲ್ಲಿ (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿಗೆ 31-01-2020 ಸಂಜೆ 5-30ರ ಒಳಗಾಗಿ ಸಲ್ಲಿಸುವುದು. ತದನಂತರ ಬಂದಂತಹ ಯಾವುದೇ ಪುಸ್ತಕಗಳನ್ನು ಆಯ್ಕೆಗೆ ಸ್ವೀಕರಿಸಲಾಗುವುದಿಲ್ಲ.

<u>ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು</u>

1. ಪುಸ್ತಕದ ಒಂದು ಪ್ರತಿ
2. ಕಾಪಿರೈಟ್ ನೋಂದಣಿ ಪ್ರಮಾಣ ಪತ್ರ . ಆಧಾರ್ ಕಾರ್ಡ್ & ಪ್ಯಾನ್ ಕಾರ್ಡ್ ನಕಲು ಪ್ರತಿಗಳು
3. ವಿತರಕರು ಸರಬರಾಜು ಹಕ್ಕನ್ನು ಮೂಲ ಪ್ರಕಾಶಕರಿಂದ ಪಡೆದಿದ್ದಲ್ಲಿ ಅದರ ನಕಲು ಪ್ರತಿಯನ್ನು ಅರ್ಜಿಯ ಜೊತೆ ಸಲ್ಲಿಸುವುದು.

ಈ ಮೇಲ್ಕಂಡ ದಾಖಲಾತಿಗಳು ಇಲ್ಲದಿದ್ದಲ್ಲಿ ಪುಸ್ತಕವನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು 30/1
ಸಾರ್ವಜನಿಕ ಗ್ರಂಥಾಲಯ ಇಲಾಖೆ ಹಾಗೂ
ಸದಸ್ಯ ಕಾರ್ಯದರ್ಶಿಗಳು.
ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ.
ಬೆಂಗಳೂರು.

ಎಸ್* Bos.Prakatane

ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ನಿರ್ದೇಶಕರ ಕಛೇರಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-01

## ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಿಗೆ ವಿವಿಧ ಯೋಜನೆಯಡಿಯಲ್ಲಿ 2019ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಸಲ್ಲಿಸುವ ಅರ್ಜಿ ನಮೂನೆ

ಅರ್ಜಿದಾರರ ಇತ್ತೀಚಿನ ಭಾವಚಿತ್ರ

| | | | |
|---|---|---|---|
| 1 | | ಅರ್ಜಿದಾರರ ಹೆಸರು ಮತ್ತು ವಿಳಾಸ<br>ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | ಪಿನ್‌ಕೋಡ್ |
| 2 | | ಪ್ರಕಾಶಕರು/ಸರಬರಾಜುದಾರರ ಹೆಸರು ಮತ್ತು ವಿಳಾಸ<br>ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | ಪಿನ್‌ಕೋಡ್ |
| 3 | (a) | ಅರ್ಜಿದಾರರು ಪುಸ್ತಕದ ಲೇಖಕರೆ/ಪ್ರಕಾಶಕರೆ/ವಿತರಕರೆ? | |
| | (b) | ಪುಸ್ತಕದ ಹಕ್ಕು | ಲೇಖಕರದು/ಪ್ರಕಾಶಕರದು |
| 4 | (a) | ಪುಸ್ತಕದ ಭಾಷೆ | |
| | (b) | ಪುಸ್ತಕದ ಶಿರೋನಾಮೆ | |
| | (c) | ಲೇಖಕರ ಹೆಸರು | |
| | (d) | ಸಂಪುಟಳ ಸಂಖ್ಯೆ (ಇದ್ದಲ್ಲಿ) | |
| | (e) | ಪುಸ್ತಕದ ವಿಷಯ | |
| 5 | | ಪ್ರಥಮ ಮುದ್ರಣ 2019, ಮರು ಮುದ್ರಣವಾಗಿದ್ದಲ್ಲಿ<br>10 ವರ್ಷಗಳ ಅಂತರವಿರಬೇಕು | 1) ಪ್ರಥಮ ಮುದ್ರಣ _ _<br>2) ಮರು ಮುದ್ರಣದ ವಿವರ _ _ |
| 6 | | ಅನುವಾದವಾಗಿದ್ದಲ್ಲಿ ಮೂಲ ಲೇಖಕರ ಹೆಸರು ಮತ್ತು ಭಾಷೆ | |

| | | | |
|---|---|---|---|
| 7 | (a) | ಪುಸ್ತಕದ ಅಳತೆ | |
| | (b) | ಪುಟಗಳ ಸಂಖ್ಯೆ | |
| | (c) | ಬೈಂಡಿಂಗ್ | ಉತ್ತಮ / ಸಾಮಾನ್ಯ |
| | (d) | ಪುಸ್ತಕದ ಬೆಲೆ | ಉತ್ತಮ ಪ್ರತಿ ರೂ. . . . . . . . . . . .<br>ಸಾದಾ ಪ್ರತಿ ರೂ. . . . . . . . . . . . |
| | (e) | ಪುಸ್ತಕ ಮುದ್ರಿಸಲು ಬಳಸಿದ ಕಾಗದದ ಗುಣಮಟ್ಟ (ಜಿ.ಎಸ್.ಎಂ.ನಲ್ಲಿ ನಮೂದಿಸುವುದು) | |
| 8 | | ಗ್ರಂಥಸ್ವಾಮ್ಯ ನೋಂದಣಿ ಸಂಖ್ಯೆ ಮತ್ತು ವರ್ಷ | |
| 9 | | ಪುಸ್ತಕದ ಸಾಫ್ಟ್ ಕಾಪಿಯನ್ನು ಸಿ.ಡಿ ರೂಪದಲ್ಲಿ ಲಗತ್ತಿಸುವುದು. (ಅನುಮತಿ ಪತ್ರದೊಂದಿಗೆ) | ಲಗತ್ತಿಸಿದೆ/ಲಗತ್ತಿಸಿಲ್ಲ. |
| 10 | | ಅರ್ಜಿದಾರರು ಕಡ್ಡಾಯವಾಗಿ ಪ್ಯಾನ್‌ಸಂಖ್ಯೆ /ಜಿ.ಎಸ್.ಟಿ/ ಕಾನೂನಿನ ಅಡಿಯಲ್ಲಿ ನೋಂದಾಯಿದ ಷಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ನೋಂದಣಿ ಪತ್ರದ ಸಂಖ್ಯೆಯನ್ನು ನಮೂದಿಸುವುದು. | |

## ಘೋಷಣಾ ಪ್ರಮಾಣ ಪತ್ರ

ಶ್ರೀಮತಿ / ಶ್ರೀ ______________________ ಆದ ನಾನು, ಮೇಲೆ ದಾಖಲಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ತಪ್ಪಿದ್ದಲ್ಲಿ ಕಾನೂನಾತ್ಮಕವಾಗಿ ಇಲಾಖೆ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ.

ಸ್ಥಳ :

ದಿನಾಂಕ :

ಅರ್ಜಿದಾರರ ಸಹಿ & ಮೊಹರು

ಅರ್ಜಿದಾರರ ಹೆಸರು (                    )

**ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:**

1. ಪ್ರತಿ ಶೀರ್ಷಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಅರ್ಜಿ ನಮೂನೆಯಲ್ಲಿ ವಿವರ ಸಲ್ಲಿಸುವುದು.
2. ವಿತರಕರು ಸರಬರಾಜು ಹಕ್ಕನ್ನು ಮೂಲ ಪ್ರಕಾಶಕರಿಂದ ಪಡೆದಿದ್ದಲ್ಲಿ ಅದರ ನಕಲು ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.
3. ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು 560 001 ಇಲ್ಲಿಗೆ ದಿನಾಂಕ: 01-01-2020 ರಿಂದ 31-01-2020 ರ ಸಂಜೆ 5.30 ಗಂಟೆ ಒಳಗಾಗಿ ಸಲ್ಲಿಸುವುದು. ನಂತರ ಬಂದ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸದರಿ ಕಛೇರಿಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 080 - 22864990 ಹಾಗೂ 22867358.